**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಸಿಸಿ. ನಂಬರ್ 1922/2024**

ಫ್ರಾ.ಸಾಃ **9**

ಚಾಸಾಃ **16**

**ದಿನಾಂಕಃ01.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

| | |
|---|---|
| ಹೆಸರು | : ರಘು ಎಂಹೆಚ್ |
| ತಂದೆಯ ಹೆಸರು | : ಹುಲಿಯಪ್ಪ |
| ವಯಸ್ಸು | : 50 ವರ್ಷ |
| ಕೆಲಸ | : ಹಿರಿಯ ಮೋಟಾರು ವಾಹನ ನಿರೀಕ್ಷಕರು |
| ವಾಸ ಸ್ಥಳ | : ಕೋಲಾರ |

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ**

ದಿಃ 01.06.2021 ರಿಂದ ಇಲ್ಲಿಯರೆಗೂ ಕೋಲಾರದಲ್ಲಿ ಮೋಟಾರು ವಾಹನ ನಿರೀಕ್ಷರಾಗಿ ಕೆಲಸ ಮಾಡುತ್ತಿದ್ದೇನೆ.

ದಿಃ 08.11.2023 ರಂದು ನಂಗಲಿ ಪೊಲೀಸ್ ಠಾಣೆಯ ಪಿಎಸ್ಐ ರವರ ಕೋರಿಕೆಯ ಮೇರೆಗೆ ಪೊಲೀಸ್ ಠಾಣೆಗೆ ಬೇಟಿ ನೀಡಿ ಎರಡು ವಾಹನಗಳನ್ನು ತಪಾಸಣೆ ಮಾಡಿರುತ್ತೇನೆ.

ಮೊದಲನೇ ವಾಹನ ಎಪಿ 39–ಯುಕೆ–9679 ಎಲ್ ಜಿವಿ ಸದರಿ ವಾಹನಕ್ಕೆ ಈ ಕೆಳಕಂಡ ಜಖಂಗಳು ಕಂಡು ಬಂದಿರುತ್ತವೆ.

1. ವಾಹನದ ಮುಂಭಾಗದ ಎಡಬದಿಯ ಬಂಪರ್ ಜಖಂ ಆಗಿರುತ್ತದೆ.

2. ಎಡಭಾಗದ ಎಡ್ ಲೈಟ್ ನ ಇಂಡಿಕೇಟರ್ ಜಖಂ ಆಗಿರುತ್ತದೆ.

3. ವಾಹನದ ಎಡಭಾಗದ ಬಾಡಿ ಡೆಂಟ್ ಆಗಿ ಜಖಂ ಆಗಿರುತ್ತದೆ.

2 ನೇ ವಾಹನ ಕೆಎ 05 ಇಕ್ಯೂ –1955 ಮೋಟಾರು ಸೈಕಲ್ ವಾಹನ ಸದರಿ ವಾಹನಕ್ಕೆ ಈ ಕೆಳಕಂಡ ಜಖಂಗಳು ಕಂಡು ಬಂದಿರುತ್ತವೆ.

1. ಮುಂಭಾಗದ ಬಲಭಾಗದ ಇಂಡಿಕೇಟರ್ ಜಖಂ ಆಗಿರುತ್ತದೆ

2. ಹೆಡಿ ಲೈಟ್ ವೈಜರ್ ಜಖಂ ಆಗಿರುತ್ತದೆ.

3. ಬಲಭಾಗದ ಕ್ರಾಶ್ ಗಾರ್ಡ್ ಜಖಂ ಆಗಿರುತ್ತದೆ

4. ಪೆಟ್ರೋಲ್ ಟ್ಯಾಂಕ್ ನ ಬಲಭಾಗ ಜಖಂ ಆಗಿರುತ್ತದೆ

5. ಹಿಂಬದಿಯ ಬಲಭಾಗದ ಇಂಡಿಕೇಟರ್ ಜಖಂ ಆಗಿರುತ್ತದೆ.

ಎರಡೂ ವಾಹನಗಳ ಬ್ರೇಕ್ ಸುಸ್ಥಿತಿಯಲ್ಲಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಅಪಘಾತವು ವಾಹನದ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಈ ಬಗ್ಗೆ ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯನ್ನು ಈಗಾಗಲೇ ನಿಪಿ 11 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ11(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಬಿಎ ವಕೀಲರಿಂದಃ**

ದ್ವಿಚಕ್ರ ವಾಹನದ ಹಿಂಭಾಗದಲ್ಲಿ ಇಂಡಿಕೇಟರ್ ಹೊರತು ಪಡಿಸಿ ಬೇರೆ ಜಖಂ ಆಗಿರುವುದಿಲ್ಲ. ವಾಹನಗಳನ್ನು ಪರಿಶೀಲಿಸದೇ ಪೊಲೀಸರ ಕೋರಿಕೆಯ ಮೇರೆಗೆ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯ ಆವರಣದಲ್ಲಿವಾಹನಗಳನ್ನು ತಪಾಸಣೆ ಮಾಡುವಾಗ ಸಾರ್ವಜನಿಕರು ಎಷ್ಟು ಜನರು ಇದ್ದರು ಎಂದರೆ ಗಮನಿಸಲಿಲ್ಲ, ನಾನು ಹೇಳಿದಂತೆ ಯಾವುದೇ ಜಖಂಗಳು ಆಗದೇ ಇದ್ದರೂ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸ. ಇದೆ

ಸಹಿ/-

(ಶ್ರೀಮತಿ ರೋಹಿಣಿ. ಡಿ)

ಅಪರ ಸಿ.ಜೆ ಮತ್ತು ಜೆಎಂಎಫ್ ಸಿ

ಮುಳಬಾಗಿಲು